**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಬಂಗಾರಪೇಟೆ**

**ಸಿಸಿ ಸಂಖ್ಯೆ:** 1061/2015 **CW**-1 **PW**-2

**ಸಾಕ್ಷಿಯನ್ನು ದಿಃ 16.11.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರುಃ ವೆಂಕಟೇಶಮೂರ್ತಿ**

**ತಂದೆ ಹೆಸರುಃ ನಾರಾಯಣಪ್ಪ**

**ವಯಸ್ಸುಃ 30**

**ವೃತ್ತಿಃ** ಕೂಲಿ

**ವಾಸ ಸ್ಥಳಃ** ನಾರಾಯಣಪುರ

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 07-06-2014 ರಂದು ನಾನು ಮತ್ತು ನನ್ನ ಸ್ನೇಹಿತ ರಮೇಶ್ ರವರು ಬಂಗಾರಪೇಟೆಯಿಂದ ನಾರಾಯಣಪುರ ಗ್ರಾಮಕ್ಕೆ ಹಿರೋ ಹೊಂಡ ಕೆಎ-40-ಹೆಚ್ 1079 ರ ಮೋಟರ್ ಸೈಕಲ್ ನಲ್ಲಿ ಹೋಗುತ್ತಿದ್ದೆವು. ನಾನು ವಾಹನವನ್ನು ಚಾಲನೆ ಮಾಡುತ್ತಿದ್ದು ರಮೇಶ್ ಹಿಂಬದಿಯಲ್ಲಿ ಕುಳಿತಿದ್ದರು. ನಾವು ಟೇಕಲ್-ಬಂಗಾರಪೇಟೆ ಮುಖ್ಯ ರಸ್ತೆ ವಿಷ್ಣು ಕಾಲೇಜ್ ಮುಂಭಾಗ ಮಧ್ಯಾಹ್ನ 12.30 ರ ಸಮಯದಲ್ಲಿ ಬರುತ್ತಿರುವಾಗ ಒಂದು ದ್ವಿಚಕ್ರ ವಾಹನ ನಮ್ಮ ವಾಹನವನ್ನು ಓವರ್ ಟೇಕ್ ಮಾಡಿಕೊಂಡು ಹೋಗಿದ್ದು ಆಗ ನಾನು ಸ್ವಲ್ಪ ನನ್ನ ವಾಹನವನ್ನು ನಿದಾನ ಮಾಡಿದೆನು ಆ ಸಮಯಕ್ಕೆ ಹಿಂಬದಿಯಿಂದ ಒಂದು ಟ್ರಾಕ್ಟರ್ ಬಂದು ನಮ್ಮ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಯಿತು. ಟ್ರಾಕ್ಟರ್ ವಾಹನ ಚಾಲಕ ಅತೀವೇಗ ಮತ್ತು ನಿರ್ಲಕ್ಷತೆಯಿಂದ ಅಂತರವನ್ನು ಕಾಪಾಡಿಕೊಳ್ಳದೇ ನಮ್ಮ ವಾಹನಕ್ಕೆ ಏಕಾಏಡಿ ಡಿಕ್ಕಿ ಮಾಡಿರುತ್ತಾರೆ.

ಅಪಘಾತದ ಪರಿಣಾಮ ನಾವು ನಮ್ಮ ವಾಹನದಿಂದ ಕೆಳಕ್ಕೆ ಬಿದ್ದೆವು. ನನ್ನ ಎಡಕಾಲು ಪಾದ ಮತ್ತು ಮೊಣಕಾಲಿಗೆ ಬಹಳಾ ಗಾಯವಾಗಿತ್ತು. ರಮೇಶ್ ರವರಿಗೆ ಎಡಕಾಲಿಗೆ ತುಂಬಾ ಪೆಟ್ಟಾಗಿತ್ತು. ಆಗ ಅಲ್ಲಿ ಇದ್ದ ಚಾಸಾ 2 ಮತ್ತು ಇತರರು ನಮ್ಮನ್ನು ಅಂಬ್ಯುಲೆನ್ಸ ನಲ್ಲಿ ಕೋಲಾರದ ಆರ್.ಎಲ್ ಜಾಲಪ್ಪ ಆಸ್ಪತ್ರೆಗೆ ದಾಖಲು ಮಾಡಿಸಿದರು. ಮರುದಿನ ನಾನು ಕೋಲಾರದ ಎಸ್.ಎನ್.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆನು

ಆಗ ಪೊಲೀಸರು ಬಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಸದರಿ ಹೇಳಿಕೆ ಮತ್ತು ಅದರಲ್ಲಿರುವ ಸಹಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಹೇಳಿಕ-ದೂರನ್ನು ಈಗಾಗಲೇ ನಿಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ನನ್ನ ಸ್ನೇಹಿತ ರಮೇಶ್ ರವರು ಅಪಘಾತದಿಂದ ಉಂಟಾದ ಗಾಯಗಳಿಂದ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ. ಟ್ರಾಕ್ಟರ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ಅದು ಹೊಸ ಟ್ರಾಕ್ಟರ್ ಆಗಿದ್ದು ಅಪಘಾತದ ಸಮಯದಲ್ಲಿ ನೋಂದಣಿ ಸಂಖ್ಯೆ ಇರಲಿಲ್ಲ.

**ಆರೋಪಿ ಮತ್ತು ಆರೋಪಿ ಪರ ವಕೀಲರು ಗೈರುಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ., ಬಂಗಾರಪೇಟೆ